ದಿನಾಂಕಃ **17.10.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

<u>ಪಾಟೀ ಸವಾಲುಃ **1** ಮತ್ತು **2** ನೇ ಪ್ರತಿವಾದಿ ಪರ ಶ್ರೀ ಸಿ ವಿ ಎಸ್ ವಕೀಲರಿಂದಃ-</u>

ದಾವಾ ಎ ಅನುಸೂಚಿ ಆಸ್ತಿಯನ್ನು ಸುಮಾರು 3 ವರ್ಷಗಳ ಹಿಂದೆ ನಾನು ಖರೀದಿ ಮಾಡಿರುತ್ತೇನೆ. ದಾವಾ ಎ ಅನುಸೂಚಿ ಆಸ್ತಿಯನ್ನು ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತೇನೆ. ದಾವಾ ಎ ಅನುಸೂಚಿ ಆಸ್ತಿಯನ್ನು ನಾನು ಖರೀದಿ ಮಾಡುವ ಪೂರ್ವದಲ್ಲಿ ನನಗೆ ಹಾಗೂ ದಾವಾ ಎ ಅನುಸೂಚಿ ಆಸ್ತಿಗೆ ಯಾವುದೇ ಹಕ್ಕು ಅಧಿಕಾರ ಇಲ್ಲಾ ಎಂದರೆ ಸರಿ. ದಾವಾ ಎ ಅನುಸೂಚಿ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ನಿವೇಶನದ ಸಂಖ್ಯೆ ನನಗೆ ಗೊತ್ತಿಲ್ಲ. ಸರ್ವೆ ನಂ 432 ರ ಆಸ್ತಿಯು ಸರ್ಕಾರದ ಆಸ್ತಿಯಾಗಿದ್ದು ಸದರಿ ಆಸ್ತಿಯನ್ನು ಸರ್ಕಾರದವರು ನಿವೇಶವನ್ನಾಗಿ ಪರಿವರ್ತಿಸಿ ನಿವೇಶನ ರಹಿತರಿಗೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ನಿಪಿ-3 ರ ನಕಾಶೆಯಲ್ಲಿ ನಿಮ್ಮ ನಿವೇಶನ ಸಂಖ್ಯೆ ಯಾವುದು ಎಂದರೆ ಸಾಕ್ಷಿ ನಿವೇಶನ ಸಂಖ್ಯೆ 9 ಎಂದು ನುಡಿಯುತ್ತಾರೆ. 1 ಮತ್ತು 3 ನೇ ಪ್ರತಿವಾದಿಯ ನಿವೇಶನ ಸಂಖ್ಯೆ ನನಗೆ ಗೊತ್ತಿಲ್ಲ.

ದಾವಾ ಎ ಅನುಸೂಚಿ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಸದರಿ ಆಸ್ತಿಗೆ ಬಸವರಾಜಪ್ಪ ಮತ್ತು ಮಲ್ಲೇಶಪ್ಪ ರವರು ಮಾಲೀಕರಾಗಿರುತ್ತಾರೆ. ಸದರಿಯವರಿಗೆ ದಾವಾ ಎ ಅನುಸೂಚಿ ಆಸ್ತಿ ವಂಜೂರಾತಿಯಾಗಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಮಂಜೂರಾತಿ ಪತ್ರ ಹಾಜರುಪಡಿಸಿರುವುದಿಲ್ಲ. ನ್ಯಾಯಾಲಯಕ್ಕೆ ಅಸಲು ದಾವಾ ಸಂಖ್ಯೆ 129ಃ2018 ರ ಡಿಕ್ರಿ ಹಾಜರುಪಡಿಸಿರುವುದಿಲ್ಲ. ನಿಪಿ-3 ರ ನಕಾಶೆಯಂತೆ ನಿವೇಶನ ಸಂಖ್ಯೆ 9 ರ ಪೂರ್ವಕ್ಕೆ ಃ ನಿವೇಶನ ಸಂಖ್ಯೆ 10, ಪಶ್ಚಿಮಕ್ಕೆ ಃ ನಿವೇಶನ ಸಂಖ್ಯೆ 22, ಉತ್ತರಕ್ಕೆ ಃ ನಿವೇಶನ ಸಂಖ್ಯೆ ಃ3, ದಕ್ಷಿಣಕ್ಕೆ ಃ ದಾರಿ ಇರುತ್ತದೆ ಆದರೆ ನಿಪಿ-3 ರ ನಕಾಶೆಯಂತೆ ಏನೂ ಇಲ್ಲಾ. ದಾವಾ ಎ ಅನುಸೂಚಿ ಆಸ್ತಿಯ ದಕ್ಷಿಣ ಭಾಗಕ್ಕೆ ದಾರಿ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಕ್ರಯಪತ್ರವನ್ನು ಹೊರತುಪಡಿಸಿ ಬೇರೆ ದಾಖಲೆ ಹಾಜರುಪಡಿಸಿರುವುದಿಲ್ಲ. ನಿಪಿ-1 ರ ಕ್ರಯಪತ್ರದ ಚಕ್ಕುಬಂಧಿಯಲ್ಲಿ ದಕ್ಷಿಣಕ್ಕೆ ರಸ್ತೆ ಇದೆ ಎಂದು ಬರೆದಿರುತ್ತದೆ. ದಾವಾ ಎ ಆಸ್ತಿಯ ದಕ್ಷಿಣಕ್ಕೆ ದಾರಿ ಇದೆ ಎಂಬ ಬಗ್ಗೆ ಯಾವುದಾದರೂ ದಾಖಲೆ ನೋಡಿದ್ದೀರಾ ಎಂದರೆ ಸಾಕ್ಷಿ ನನ್ನ ಮಾರಾಟಗಾರರ ಹಕ್ಕುಪತ್ರದಲ್ಲಿ ದಕ್ಷಿಣ ಭಾಗದಲ್ಲಿ ರಸ್ತೆ ಇರುತ್ತದೆ ಎಂದು ನಮೂದು ಇರುತ್ತದೆ. ಸದರಿ ಹಕ್ಕು ಪತ್ರ ನನ್ನ ಬಳಿ ಇರುತ್ತದೆ. ಸದರಿ ಹಕ್ಕು ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ನಿಪಿ-1 ರಲ್ಲಿ ನಿವೇಶನವನ್ನು ಖರೀದಿಸಿರುತ್ತೇನೆ. ಸುಮಾರು 2 ವರ್ಷಗಳ ಹಿಂದೆ ಮನೆ ಕಟ್ಟಿರುತ್ತೇನೆ. ದಾವಾ ಎ ಅನುಸೂಚಿ ಆಸ್ತಿಯು ಕಡೂರು ಪುರಸಭಾ ವ್ಯಾಪ್ತಿಗೆ ಬರುತ್ತದೆ. ಮನೆ ನಿರ್ಮಿಸಲು ನೀವು ಪುರಸಭೆಯಿಂದ ಅನುಮೋದನೆ ಪತ್ರ ಮತ್ತು ಕಟ್ಟಡ ಪರವಾನಗಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಸಾಕ್ಷಿ ಮುಂದುವರೆದು ನಾನು ಅವುಗಳನ್ನು ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಪಶ್ಚಿಮಕ್ಕೆ 1 ನೇ ಪ್ರತಿವಾದಿಯ ಮನೆ ಇರುತ್ತದೆ. 1 ನೇ ಪ್ರತಿವಾದಿ ಮನೆ ನಿರ್ಮಿಸಿ ಎಷ್ಟು ವರ್ಷಗಳಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಮತ್ತು 1 ನೇ ಪ್ರತಿವಾದಿ ಮನೆ ನಡುವೆ ಯಾವುದೇ ದಾರಿ ಇಲ್ಲಾ ಎಂದರೆ ಸರಿ. ನಾನು ಕಡೂರು ಪುರಸಭೆಗೆ ದಾರಿಯ ವ್ಯವಸ್ಥೆ ಮಾಡಿ ಎಂದು ಅರ್ಜಿ ನೀಡಿರುತ್ತೇನೆ, ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ದಾವಾ ಎ ಅನುಸೂಚಿ ಆಸ್ತಿ ರೆವಿನ್ಯೂ ಸೈಟ್ ಆಗಿರುವ ಕಾರಣ ಪುರಸಭೆಯವರು ಅರ್ಜಿಯನ್ನು ಮಾನ್ಯ ಮಾಡದ ಕಾರಣ ತಹಶೀಲ್ದಾರ್ ರವರಿಗೆ ಅರ್ಜಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಚಕ್ಕುಬಂಧಿಯ ದಕ್ಷಿಣ ಭಾಗಕ್ಕೆ ಹೇಳಿದ ರಸ್ತೆಯು ಪುರಸಭೆಯಿಂದಾಗಲೀ ಅಥವಾ ಕಂದಾಯ ಇಲಾಖೆಯಿಂದ ಅನುಮೋದಿತ ರಸ್ತೆ ಅಲ್ಲಾ ಎಂದರೆ ಸರಿ. ದಾವಾ ಎ ಅನುಸೂಚಿ ಆಸ್ತಿ ನನ್ನ ಹೆಸರಿಗೆ ಇರುವ ಬಗ್ಗೆ ಅಸಸ್ಮೆಂಟ್ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ದಾವಾ ಎ ಅನುಸೂಚಿ ಆಸ್ತಿಯ ಪಹಣಿ ಪತ್ರಿಕೆಯನ್ನು ನಿಪಿ-6 ರಂತೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಾನು ದಾವಾ ಎ ಅನುಸೂಚಿ ಆಸ್ತಿಯನ್ನು ಮನೆ ನಿರ್ಮಿಸುವ ಪೂರ್ವದಲ್ಲಿ ಅನ್ಯಕ್ರಾಂತ ಮಾಡಿಸಿರುವುದಿಲ್ಲ.

ನಮ್ಮ ಮನೆಯ ಪೂರ್ವ ದಿಕ್ಕಿಗೆ ಃ ನನ್ನ ಅತ್ತೆ ಹೇಮಾವತಿಯವರ ಮನೆ ಇರುತ್ತದೆ ಇದು ಈಗ ನನ್ನ ಹೆಂಡತಿ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ಹೇಮಾವತಿಯವರ ಮನೆಯ ಪೂರ್ವಕ್ಕೆ ಃ ಮಲ್ಲೇಶಪ್ಪ ರವರ ಮನೆ ಇರುತ್ತದೆ. ಹೇಮಾವತಿ ಮತ್ತು ಮಲ್ಲೇಶಪ್ಪ ರವರ ಮನೆಯ ಮಧ್ಯೆ ಎಮ್ಮೆದೊಡ್ಡಿಯಿಂದ ಕಡೂರಿಗೆ ಹೋಗುವ ಕೆ ಹೊಸಹಳ್ಳಿ ಮುಖ್ಯ ರಸ್ತೆಗೆ ಸಂಪರ್ಕಿಸುವ ಒಂದು ಓಣಿ ಇರುತ್ತದೆ ಎಂದರೆ ಸರಿ. ಸದರಿ ಓಣಿಯಿಂದ ನಾನು ಮತ್ತು ಹೇಮಾವತಿ ಓಡಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಓಣಿಯು ಉತ್ತರ ದಕ್ಷಿಣಾಭಿಮುಖವಾಗಿರುತ್ತದೆ ಹಾಗೂ 10 ಅಡಿ ಅಗಲ ಇರುತ್ತದೆ.

ಮಲ್ಲೇಶಪ್ಪ ರವರ ಮನೆಯ ಪೂರ್ವಕ್ಕೆ ಜಯಣ್ಣ ರವರ ಮನೆ ಇರುತ್ತದೆ. ಜಯಣ್ಣನವರ ಮನೆಯ ಪೂರ್ವಕ್ಕೆ ಚಂದ್ರಪ್ಪ ರವರ ಮನೆ ಇರುತ್ತದೆ. ಜಯಣ್ಣ ಮತ್ತು ಮಲ್ಲೇಶಪ್ಪ ಯಾವ ರೀತಿ ಓಡಾಡಿಕೊಂಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ಓಣಿ ಮೂಲಕ ಮುಖ್ಯ ರಸ್ತೆಗೆ ಬರುತ್ತಾರೆ ಎಂದು ನುಡಿಯುತ್ತಾರೆ. ಮಲ್ಲೇಶಪ್ಪ ರವರ ಮನೆಯ ಪೂರ್ವ ದಿಕ್ಕಿಗೆ ಬರುವ ಜಯಣ್ಣನವರು ಪೂರ್ತಿ ನಿವೇಶನದಲ್ಲಿ ಮನೆ ನಿರ್ಮಿಸಿದ್ದು ಯಾವುದೇ ರಸ್ತೆ ಓಣಿ ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ಮಲ್ಲೇಶಪ್ಪರವರ ಪೂರ್ಣ ನಿವೇಶನದಲ್ಲಿ ಮನೆ ನಿರ್ಮಿಸಿರುತ್ತಾರೆ ಎಂದರೆ ಸರಿ. ನನ್ನ ಮತ್ತು ನನ್ನ ಅತ್ತೆ ಹೇಮಾವತಿ ಮನೆಯ ಪೂರ್ವ ದಿಕ್ಕಿನ ಯಾವುದೇ ಛಾಯಾಚಿತ್ರ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನೀವು ಪೂರ್ವ ದಿಕ್ಕಿನ ಛಾಯಾಚಿತ್ರ ಯಾಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಾನು ಹಾಜರುಪಡಿರಸಿರುವ ಛಾಯಾಚಿತ್ರ ಸಾಕಾಗಬಹುದು ಎಂದು ತಿಳಿದು ಬೇರೆ ಛಾಯಾಚಿತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಛಾಯಾಚಿತ್ರದಲ್ಲಿರುವ ಖಾಲಿ ಜಾಗದ ರೀತಿಯಲ್ಲೇ ಮಲ್ಲೇಶಪ್ಪನವರ ಮನೆ ಬಳಿ ಇರುತ್ತದೆ ಎಂದರೆ ಸಾಕ್ಷಿ ಆ ರೀತಿ ಜಾಗ ಇರುವುದಿಲ್ಲ ಎಂದು ನುಡಿಯುತ್ತಾರೆ. ಮಲ್ಲೇಶಪ್ಪ, ಜಯಣ್ಣ ಮತ್ತು ಚಂದ್ರಪ್ಪ ರವರು ತಮ್ಮ ಮನೆಯ ಮುಂಭಾಗ ಇದ್ದ ಖಾಲಿ ಜಾಗ ಸೇರಿಸಿ ಕಟ್ಟಡ ಕಟ್ಟಿರುತ್ತಾರೆ ಎಂದರೆ ಸರಿ.

1 ನೇ ಪ್ರತಿವಾದಿ, ನಮ್ಮ ಮನೆಯ ಪೂರ್ವದ ಮನೆಯ ಮಾಲೀಕರು, ಹೇಮಾವತಿ, ಮಲ್ಲೇಶಪ್ಪ, ಜಯಣ್ಣ, ಚಂದ್ರಪ್ಪ ಅವರ ಮನೆಯ ದಕ್ಷಿಣ ಭಾಗಕ್ಕೆ ಇದ್ದ ಖಾಲಿ ಜಾಗ ಅವರಿಗೆ ಸೇರಿದ ಜಾಗ ಅಲ್ಲ ಎಂದರೆ ಸರಿ. ಅವರು ಖಾಲಿ ಜಾಗವನ್ನು ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಒತ್ತುವರಿಯಾಗಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನಾನು ಖರೀದಿಸುವ ಪೂರ್ವದಲ್ಲಿ ದಾವಾ ಆಸ್ತಿಯ ಹಿನ್ನೆಲೆಯ ಮಾಹಿತಿ ಇಲ್ಲಾ ಎಂದರೆ ಸರಿ. ನಾನು ಜಯಣ್ಣ ಮತ್ತು ಚಂದ್ರಪ್ಪ ರವರ ವಿರುದ್ಧ ಒತ್ತುವರಿ ಮಾಡಿರುತ್ತಾರೆ ಎಂದು ದಾವೆ ಹೂಡಿರುತ್ತೀರಾ ಎಂದರೆ ಸಾಕ್ಷಿ ಅವರು ಇತ್ತೀಚೆಗೆ ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ದಕ್ಷಿಣ ಭಾಗಕ್ಕೆ ರಸ್ತೆ ಇದೆ ಎಂದು ತೋರಿಸಲು ನನ್ನ ಕ್ರಯಪತ್ರ ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಈಗ ಇಲ್ಲಾ ಎಂದರೆ ಸರಿ.

ದಾವಾ ಎ ಅನುಸೂಚಿ ಆಸ್ತಿಯಜನ್ನು ನಾನು ಖರೀದಿ ಮಾಡುವ ಪೂರ್ವದಲ್ಲೇ ನನ್ನ ಅತ್ತೆಯವರು ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಮನೆ ನಿರ್ಮಿಸಿದ್ದರು ಎಂದರೆ ಸರಿ. ನನ್ನ ಅತ್ತೆಯವರು ಸದರಿ ಮನೆ ನಿರ್ಮಿಸಿ ಸುಮಾರು 30 ವರ್ಷವಾಗಿರಬಹುದು. ನನ್ನ ಅತ್ತೆಯವರು ಮನೆ ಕಟ್ಟಿದ ನಂತರ ದಾವಾ ಎ ಅನುಸೂಚಿ ಆಸ್ತಿಯ ಉತ್ತರದಿಂದ ದಕ್ಷಿಣಾಭಿಮುಖವಾಗಿ ಇರುವ ರಸ್ತೆಯಲ್ಲಿ ಓಡಾಡುತ್ತಿದ್ದಾರೆ ಎಂದರೆ ಸಾಕ್ಷಿ 1 ನೇ ಪ್ರತಿವಾದಿಯ ಮನೆ ಮುಂದೆ ಇರುವ ರಸ್ತೆಯಲ್ಲಿ ಓಡಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಹೊಸಹಳ್ಳಿ ಮುಖ್ಯ ರಸ್ತೆಯ ಉತ್ತರ ದಿಕ್ಕಿಗೆ ನಿವೇಶನಗಳು ಇವೆ ಎಂದರೆ ಸಾಕ್ಷಿ ಅಲ್ಲಿ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನಿವೇಶನದ ಉತ್ತರ ದಿಕ್ಕಿಗೆ ನಿಪಿ-3 ರ ನಕ್ಷೆಯಂತೆ ನಿವೇಶನಗಳು ಹಾಗೂ ಮನೆ ಇದೆ ಎಂದರೆ ಸರಿ.

1 ನೇ ಪ್ರತಿವಾದಿ ಮನೆ ನಿರ್ಮಿಸಿರುವ ನಿವೇಶನ ಸಂಖ್ಯೆ 6 ಆಗಿರುತ್ತದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದು ನುಡಿಯುತ್ತಾರೆ. ಮಲ್ಲೇಶಪ್ಪ ನವರ ಮನೆ ಆದ ನಂತರ ಪೂರ್ವದ ಕಡೆ 10 ಅಡಿ ರಸ್ತೆ ಇತ್ತು ಎಂದರೆ ಸರಿಯಲ್ಲ. ಮಲ್ಲೇಶಪ್ಪ ರವರ ಮನೆಯ ಉತ್ತರ ಭಾಗಕ್ಕೆ ನಿವೇಶನಗಳಿದ್ದು, ಸದರಿ ನವೇಶನದಾರರು ಓಡಾಡಲು ಮಲ್ಲೇಶಪ್ಪ ನವರ ಮನೆಯ ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿ. ದಾವಾ ಎ ಅನುಸೂಚಿ ಆಸ್ತಿ ಮತ್ತು ಹೇಮಾವತಿಯವರ ಮನೆಯ ಮುಂದೆ ಇರುವ ದಾರಿಯಲ್ಲಿ ನಾವು ಓಡಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿ ಅದು ರಸ್ತೆಯಲ್ಲ ನಮ್ಮ ಮನೆಯ ಮುಂಭಾಗ ಇರುವ ರಾಜಣ್ಣ ರವರು ಬಿಟ್ಟಿರುವ ಜಾಗ ಎಂದು ನುಡಿಯುತ್ತಾರೆ. ನಾವು ಪ್ರಸ್ತುತ ಓಡಾಡಿಕೊಂಡಿರುವ ಜಾಗ ರಾಜಣ್ಣ ರವರಿಗೆ ಸೇರಿದ್ದು ಎಂಬ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ಅದು ರಾಜಣ್ಣನವರ ನಿವೇಶನ ಆಗಿದ್ದಲ್ಲಿ ನಮಗೆ ಓಡಾಡಲು ಬಿಡುತ್ತಿರಲಿಲ್ಲ ಎಂದರೆ ಸಾಕ್ಷಿ ಮಾನವೀಯತೆ ನೆಲೆಯಲ್ಲಿ ಅವರು ಬಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ದಾವಾ ಎ ಅನುಸೂಚಿ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಚಿಕ್ಕಮಗಳೂರಿನಲ್ಲಿ ವಾಸವಾಗಿದ್ದೆ. ನಾನು ದಾವಾ ಬಿ ಅನುಸೂಚಿ ಆಸ್ತಿ ಯನ್ನು ಅನುಭೋಗದ ಅಡಿಯಲ್ಲಿ ಉಪಯೋಗಿಸಿಕೊಂಡು ಬರುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ದಾವಾ ಎ ಅನುಸೂಚಿ ಆಸ್ತಿಯನ್ನು ಖರೀದಿಸಿದ ನಂತರದಲ್ಲಿ ಈ ವಿವಾದವನ್ನು ಹುಟ್ಟುಹಾಕಿರುತ್ತೇನೆಯೇ ಹೊರತು ಅಲ್ಲಿ ವಾಸವಾಗಿರುವ ಇತರೇ ನಿವೇಶನದಾರರು ಯಾವುದೇ ದಾವೆಯನ್ನು ಹೂಡಿರುವುದಿಲ್ಲ ಎಂದರೆ ಇತರೇ ನಿವೇಶನದಾರರಿಗೆ ಸೂಕ್ತ ರಸ್ತೆ ಇದ್ದು ನನಗೆ ರಸ್ತೆ ಇಲ್ಲದ ಕಾರಣ ಈ ದಾವೆ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಎ ಅನುಸೂಚಿ ಆಸ್ತಿ ಮತ್ತು ಪೂರ್ವ ದಿಕ್ಕಿನ ಹೇಮಾವತಿ ರವರ ಮನೆ ನಡುವೆ ಇರುವ ಜಾಗದಲ್ಲಿ ನೀವು ಓಡಾಡಿಕೊಂಡಿರುವ ಬಗ್ಗೆ ಈ ದಾವೆಯಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

ನಾನು ಓಡಾಡುತ್ತಿರುವ ರಸ್ತೆಯ ಛಾಯಾಚಿತ್ರವನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲಾ ಎಂದರೆ ಸರಿ. ನನ್ನ ಮನೆಯ ಪಶ್ಚಿಮ ದಿಕ್ಕಿಗೆ ಮತ್ತು 1 ನೇ ಪ್ರತಿವಾದಿ ಮನೆಯ ನಡುವೆ ಯಾವತ್ತೂ ರಸ್ತೆ ಇರಲಿಲ್ಲ ಎಂದರೆ ಸರಿ. ನಿವೇಶನದಾರರು ತಮಗೆ ಸೇರಿದ ನಿವೇಶನದ ಪೈಕಿ ರಸ್ತೆಗಾಗಿ ಜಾಗವನ್ನು ಮೀಸಲಿಟ್ಟಿರುವುದನ್ನು ಹೊರತುಪಡಿಸಿ ಬೇರೆ ಯಾವುದೇ ರಸ್ತೆಗಳು ಅಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಮಲ್ಲೇಶಪ್ಪರವರ ಮನೆಯ ಪೂರ್ವಕ್ಕೆ 10 ಅಡಿ ರಸ್ತೆ ಇದ್ದು ನನಗೆ ಮಾರಾಟ ಮಾಡಿರುವ ಮಾಲೀಕರೂ ಸಹ ಸದರಿ ರಸ್ತೆಯನ್ನು ಬಳಸುತ್ತಿದ್ದರು ಎಂದರೆ ಸರಿಯಲ್ಲ. ಈಗ ನನಗೆ ಮತ್ತು 1 ನೇ ಪ್ರತಿವಾದಿಗೆ ಪರಸ್ಪರ ವಿಶ್ವಾಸ ಇಲ್ಲಾ ಎಂದರೆ ಸರಿ. ನಾನು ನಿವೇಶನ ಖರೀದಿಸುವ ಸಮಯದಲ್ಲಿ ಪ್ರತಿವಾದಿ ಮನೆಯನ್ನು ನಿರ್ಮಿಸುವ ಸಲುವಾಗಿ ಅವರಿಗೆ ತೊಂದರೆ ನೀಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಎ ಅನುಸೂಚಿ ಆಸ್ತಿಗೆ ಮಾಲೀಕರಲ್ಲ ಎಂದರೆ ಸರಿಯಲ್ಲ. ದಾವಾ ಬಿ ಅನುಸೂಚಿ ಆಸ್ತಿ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ದಾವಾ ಬಿ ಅನುಸೂಚಿ ಆಸ್ತಿ ರಸ್ತೆ ಆಗಿರದಿದ್ದರೂ ಸಹ 1 ನೇ ಪ್ರತಿವಾದಿಯ ಮೇಲಿರುವ ದ್ವೇಷದಿಂದ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

<u>**3** ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.